ಗುಲ್ಬರ್ಗಾ ಜಿಲ್ಲಾ ಉದ್ಯೋಗಾಧಿಕಾರಿ ಹುದ್ದೆಯನ್ನು ಸಹಾಯಕ ನಿರ್ದೇಶಕರು ಹುದ್ದೆಯಂತ ಮಟ್ಟಕ್ಕೇರಿಸುವ ಪ್ರಸ್ತಾಪ

ಪ್ರಶ್ನೆ. ಶ್ರೀ ಖಮರುಲ್ ಇಸ್ಲಾಮ್ (ಗುಲ್ಬರ್ಗ).—ಮಾನ್ಯ ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲಾ ಉದ್ಯೋಗಾಧಿಕಾರಿ ಹುದ್ದೆಯನ್ನು ಸಹಾಯಕ ನಿರ್ದೇಶಕರು (ಉದ್ಯೋಗ) ಹುದ್ದೆಯ ಮಟ್ಟಕ್ಕೇರಿಸುವ ಪ್ರಸ್ತಾವನೆ ಇದೆಯೆ?

ಆ) ಹಾಗಿದ್ದಲ್ಲಿ ಅದು ಯಾವಾಗ ಮೇಲ್ಮಟ್ಟಕ್ಕೇರಿಸಲ್ಪಡುವುದು?

ಇ) ಇಲ್ಲದಿದ್ದಲ್ಲಿ ಕಾರಣವೇನು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಇಲ್ಲ.

ಆ) 'ಅ' ಗೆ ಕೊಟ್ಟಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಇ) ಉದ್ಯೋಗ ವಂತ್ತು ತರಬೇತಿ ಮಹಾ ನಿರ್ದೇಶನಾಲಯ, ನವದೆಹಲಿ, ಇವರು ನೀಡಿರುವ ಮಾರ್ಗ ಸೂಚಿಗಳನ್ವಯ ರಾಜ್ಯದಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಗಳು ಸ್ಥಾಪಿತಗೊಂಡು ಕಾರ್ಯ ನಿರ್ವಹಿಸುತ್ತಿವೆ. ಅವರು ಸೂಚಿಸಿರುವ ಮಾದರಿಯಲ್ಲಿ ಒಂದೇ ತೆರನಾಗಿ ರಾಜ್ಯದ ಎಲ್ಲಾ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಕೇಂದ್ರದ ಮುಖ್ಯಸ್ಥರು ಉದ್ಯೋಗಾಧಿಕಾರಿಯವ ರಾಗಿರುತ್ತಾರೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸ ಲಾಯಿತು. ಈಗ ಅಲ್ಪ ಕಾಲಾವಧಿ ಪ್ರಶ್ನೆಯನ್ನು ಶ್ರೀ ಎಂ. ವಿ. ವೆಂಕಟಪ್ಪನವರು ಕೇಳಬಹುದು.

ಶ್ರೀ ಎಂ.ವಿ. ವೆಂಕಟಪ್ಪ.—ಸಚಿವರ ಉತ್ತರದಲ್ಲಿ ಇದನ್ನು ಯೋಗ್ಯತೆಯ ಆಧಾರದ ಮೇಲೆ ಕೋರ್ಟ್ ನಿರ್ಧರಿಸುತ್ತದೆ ಎಂದು ಹೇಳಿದ್ದಾರೆ ? ಜೊತೆಗೆ ನಮ್ಮ ರಾಜ್ಯಕ್ಕೆ ಇರುವ ಮೆರಿಟ್ಸ್ ಏನೆಂ ಎಂದು ಹೇಳುತ್ತೀರಾ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಸಚಿವರು).—ಅಧ್ಯಕ್ಷರೇ ಇದು ಬಹಳ ಪ್ರಾಮುಖ್ಯ ವಾದ ವಿಚಾರ. ಇದು ರಾಷ್ಟ್ರದ ಉಚ್ಚನ್ಯಾಯಾಲಯದ ಮುಂದಿದ್ದು ಕೇಂದ್ರ ಸರ್ಕಾರದ ಪೌರೋಹಿತ್ ದಲ್ಲಿ ೫ನೇ ತಾರೀಖು ೩ ರಾಜ್ಯಗಳ ಮುಖ್ಯಮಂತ್ರಿಗಳನ್ನು ಚರ್ಚೆ ಆರಂಭ ಮಾಡಲು ಕರೆದಿದ್ದಾರೆ. ಆ ಸಭೆ ೫ನೇ ತಾರೀಖು ನಡೆಯುವುದರಿಂದ ಮುಂದೆ ಸಾರ್ವಭೌಮತ್ವದ ಸಭೆಯ ಮುಂದೆ ಬರುವ ಚರ್ಚೆಯ ವಿವರಗಳನ್ನು ಪ್ರಸ್ತಾಪ ಮಾಡುವುದು ಸರಿಯಲ್ಲ. ಈ ಬಗ್ಗೆ ನಾನು ಒಂದು ಭರವಸೆ ಕೊಡುತ್ತೇನೆ. ನಮ್ಮ ರಾಜ್ಯದ ಹಿತವನ್ನು ಕಾಪಾಡಲು ನಾವು ಕಾಯಾ ವಾಚಾ ಮನಸಾ ಪ್ರಯತ್ನ ಮಾಡಂತ್ತೇವೆ. ಆದ್ದರಿಂದ ರಾಜ್ಯದ ಹಿತದೃಷ್ಟಿಯಿಂದ ಇದನ್ನು ಪ್ರಸ್ತಾಪ ಮಾಡದೆ ಇಷ್ಟಕ್ಕೆ ಕೈ ಬಿಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ.—ಇದು ಸುಪ್ರೀಂ ಕೋರ್ಟಿನ ವ್ಯಾಪ್ತಿಗೆ ಹೋಗದ ಹಾಗೆ ಏನಾದರೂ ಮಾಡಿ ತೀರ್ಮಾನ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಆಗಬಹುದು. ಉತ್ತಮವಾದ ಸಲಹೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಚಾಮರಾಜನಗರ ತಾಲ್ಲೂಕಿನಲ್ಲಿ ಒಂದು ಕೋಟಿ ರೂಪಾಯಿಗಳನಷ್ಟು ಕಬ್ಬಿನ ಬೆಳೆ ವಿದ್ಯುತ್ ಅಭಾವದಿಂದ ನಷ್ಟವಾಗುತ್ತಿದೆ. ಈ ಬಗ್ಗೆ ಮಾನ್ಯ ಮಂತ್ರಿಗಳಿಗೆ ಅನೇಕ ಮನವಿಗಳನ್ನು ಕೊಟ್ಟಿದ್ದೇನೆ. ಆದರೂ ಕ್ರಮತೆಗೆದುಕೊಂಡಿಲ್ಲ. ತಮ್ಮ ಮೂಲಕ ಮತ್ತೊಮ್ಮೆ ಹೇಳುತ್ತಿದ್ದೇನೆ. ಅಲ್ಲಿ ಟ್ರಾನ್ಸ್ ಫಾರ್ಮರ್‌ಗಳ ತೊಂದರೆ ಇದೆ ಎಂದು ತಿಳಿದು ಬಂದಿದೆ.

ಇದರಿಂದ ಈಗ ನಷ್ಟಕ್ಕೆ ಒಳಗಾಗಿರುವುದು ಕಬ್ಬಿನ ಬೆಳೆ. ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಸರಿಯಾಗಿ ಕೊಡುತ್ತಿಲ್ಲ. ಮಾನ್ಯ ಸಚಿವರು ವಿದ್ಯುತ್ ಮಂಡಳಿ ಅಧಿಕಾರಿಗಳನ್ನು ಕರೆದು ಮಾತನಾಡಿ ಒಣಗುತ್ತಿರುವ ಕಬ್ಬಿನ ಬೆಳೆಗೆ ನೀರು ಒದಗಿಸಲು ಗಮನಹರಿಸಬೇಕು. ಇಡೀ ರಾಜ್ಯದಲ್ಲೇ ಅತ್ಯಂತ ಕಡು ಬಡತನದಲ್ಲಿರುವ ತಾಲ್ಲೂಕು ಅದು. ಜನ ತೊಂದರೆಯಲ್ಲಿದ್ದಾರೆ.